ಕರ್ನಾಟಕ ವಿಧಾನಸಭೆ

ಮಂಗಳವಾರ 24ನೇ ಸೆಪ್ಟೆಂಬರ್ 2002 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 12 ಗಂಟೆ 17 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ರವರು ಪೀಠದಲ್ಲಿ ಉಪಸ್ಥಿತರಿದ್ದರು

ಸಂತಾಪ ಸೂಚನೆ

ಸಭಾಧ್ಯಕ್ಷರು :

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎ.ವಿ. ಮುನಿಸ್ವಾಮಿ ಶ್ರೀ ಶಂಕರಗೌಡ ವಿ. ಪಾಟೀಲ ಹಾಗೂ ಶ್ರೀ ಬಿ.ಎನ್.ಕೆ. ಪಾಪಯ್ಯ ಇವರುಗಳು ನಿಧನವಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸುತ್ತಿದ್ದೇನೆ.

1. ಶ್ರೀ ಎ.ವಿ. ಮುನಿಸ್ವಾಮಿ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎ.ವಿ. ಮುನಿಸ್ವಾಮಿ ಅವರು 1913 ನೇ ಇಸವಿ ಅಕ್ಟೋಬರ್ 1 ರಂದು ಮಾಲೂರು ತಾಲ್ಲೂಕಿನ ಅರಳೇರಿ ಗ್ರಾಮದಲ್ಲಿ ಜನಿಸಿದ್ದು ಕೃಷಿಕರಾಗಿದ್ದರು. 1961 ರಿಂದ 1963 ರ ವರೆಗೆ ಮಾಲೂರಿನ ಟಿ.ಎ.ಪಿ.ಸಿ.ಎಂ.ಎಸ್. ಸಂಸ್ಥೆಯ ಅಧ್ಯಕ್ಷರಾಗಿ ಹಾಗೂ 1967 ರಿಂದ 1971 ರವರೆಗೆ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿದ್ದರು. ಶ್ರೀಯುತರು ಮಾಲೂರು ಕ್ಷೇತ್ರದಿಂದ ಐದನೇ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 01-09-2002 ರಂದು ನಿಧನ ಹೊಂದಿದರು.

2. ಶ್ರೀ ಶಂಕರಗೌಡ ವಿ. ಪಾಟೀಲ್

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಶಂಕರಗೌಡ ವಿ. ಪಾಟೀಲ್ ಅವರು 1925 ನೇ ಇಸವಿ ಡಿಸೆಂಬರ್ 22 ರಂದು ಧಾರವಾಡ ಜಿಲ್ಲೆಯ ನರಗುಂದದ ಬನಹಟ್ಟಿಯಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ಧಾರವಾಡದ ಕರ್ನಾಟಕ ಕೇಂದ್ರ ಸಹಕಾರ ಬ್ಯಾಂಕ್‌ನ ನಿರ್ದೇಶಕರಾಗಿ 18 ವರ್ಷಗಳು ದೀರ್ಘಕಾಲ ಸೇವೆ ಸಲ್ಲಿಸಿದ್ದರು. ಕೃಷಿ ಉತ್ಪನ್ನ ಮಾರುಕಟ್ಟೆ ಅಧ್ಯಕ್ಷರಾಗಿ, ಮಲಪ್ರಭಾ - ಘಟಪ್ರಭಾ ಕಾಡಾ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಸಹಕಾರಿ ಯೂನಿಯನ್ನಿನ ಉಪಾಧ್ಯಕ್ಷರಾಗಿ, ನವಲಗುಂದ ತಾಲ್ಲೂಕಿನ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ, ಕರ್ನಾಟಕ ಲಿಬರಲ್ ಎಜುಕೇಷನ್ ಸಂಸ್ಥೆಯ ಆಜೀವ ಸದಸ್ಯರಾಗಿ, ಹಲವಾರು ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದರು. ಶ್ರೀಯುತರು 6 ನೇ ವಿಧಾನ ಸಭೆಗೆ ನವಲಗುಂದ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿರುತ್ತಾರೆ.

ಶ್ರೀಯುತರು ದಿನಾಂಕ 17-09-2002 ರಂದು ನಿಧನ ಹೊಂದಿದರು.

3. ಶ್ರೀ ಬಿ.ಎನ್.ಕೆ. ಪಾಪಯ್ಯ

ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಬಿ.ಎನ್.ಕೆ. ಪಾಪಯ್ಯ ಅವರು ಗೌರಿಬಿದನೂರು ತಾಲ್ಲೂಕಿನ ಬಂಡರಹಳ್ಳಿಹಳ್ಳಿಯಲ್ಲಿ 1919 ನೇ ಇಸವಿಯಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು. ಶ್ರೀಯುತರು ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದರು. ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆ ಉಪಾಧ್ಯಕ್ಷರಾಗಿ, ಗೌರಿಬಿದನೂರು ತಾಲ್ಲೂಕು

ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ, ಗೌರಿಬಿದನೂರಿನ ಪ್ರಾಥಮಿಕ ಭೂ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ, ಕೋಲಾರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಗೌರಿಬಿದನೂರು ತಾಲ್ಲೂಕಿನ ತೊಂಡೇಬಾವಿಯಲ್ಲಿ ಸ್ವಾಮಿ ವಿವೇಕಾನಂದ ಪ್ರೌಢ ಶಾಲೆಯನ್ನು ನಡೆಸುತ್ತಿದ್ದರು. ಶ್ರೀಯುತರು ಗೌರಿಬಿದನೂರು ಕ್ಷೇತ್ರದಿಂದ ಆರನೇ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 10-09-2002 ರಂದು ನಿಧನ ಹೊಂದಿದರು.

3. ಶ್ರೀ ಬಿ.ವಿ. ಕಾರಂತ

ರಂಗಭೂಮಿ ದಿಗ್ಗಜ ಕಾರಂತರು ಕರಾವಳಿಯ ಕಡಲಿನಿಂದ ಬಯಲುಸೀಮೇಗೆ ಬಂದ ಕಾರಂತ ಗುಬ್ಬಿ ಕಂಪನಿಗೆ ಕಾಲಿಟ್ಟು ಅಮೋಘ ರಂಗಸಾಧನೆಯನ್ನು ಮಾಡಿದರು. ಕಾರಂತರ ರಂಗಮೇಳಗಳು ಕನ್ಯಾಕುಮಾರಿಯಿಂದ ಹಿಡಿದು ಭೂಪಾಲದವರೆಗೆ ಹರಡಿಕೊಂಡಿವೆ. ಪದ್ಮಶ್ರೀ ಸೇರಿದಂತೆ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳು ಕಾರಂತರಿಗೆ ಲಭಿಸಿವೆ. ಕಾರಂತರು ಎಂದೂ ಪ್ರಶಸ್ತಿಗಾಗಿ ಹಂಬಲಿಸಲಿಲ್ಲ. ಪದವಿಗಳು ಅವರನ್ನೇ ಅರಸಿ ಬಂದವು. ಕಾರಂತರ ನಿಧನದಿಂದ ಕನ್ನಡ ರಂಗಭೂಮಿಯಲ್ಲಿ ಒಂದು ಪ್ರಮುಖ ಕೊಂಡಿ ಕಳಚಿದಂತಾಗಿದೆ. ರಂಗಭೂಮಿ ಹಾಗೂ ಚಲನಚಿತ್ರ ರಂಗಕ್ಕೆ ಸೃಜನಾತ್ಮಕ ಸಂಪರ್ಕವನ್ನು ಸ್ಥಾಪಿಸುವುದರಲ್ಲಿ ಕಾರಂತರು ಪ್ರಮುಖ ಪಾತ್ರ ವಹಿಸಿದ್ದರು. ಮೈಸೂರಿನಲ್ಲಿ ರಂಗಾಯಣ ಕೇಂದ್ರವನ್ನು ಸ್ಥಾಪಿಸಿ ಅನೇಕ ಕಲಾವಿದರನ್ನು ಬೆಳಕಿಗೆ ತಂದರು.

ಕನ್ನಡ ರಂಗಭೂಮಿ ಹಾಗೂ ಸಿನಿಮಾ ಲೋಕ ಕಂಡ ಬಹುಮುಖ ಪ್ರತಿಭೆಯುಳ್ಳವರು. 2002 ನೇ ಸಾಲಿಗೆ ಕಾರಂತರವರಿಗೆ ರಾಜ್ಯ ಸರ್ಕಾರ ಪದ್ಮವಿಭೂಷಣ ಪ್ರಶಸ್ತಿಗೆ ಶಿಫಾರಸ್ಸು ಮಾಡಿದೆ.

ಶ್ರೀಯುತರು ದಿನಾಂಕ 1-9-2002 ರಂದು ನಿಧನ ಹೊಂದಿದರು.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಗುರುಸ್ವಾಮಿ ಎಂಬ ಒಬ್ಬ ರೈತ ಹುತಾತ್ಮನಾಗಿದ್ದಾನೆ. ಅವರಿಗೂ ಸಹ ಈ ಸಂದರ್ಭದಲ್ಲಿ ಸಂತಾಪ ಸೂಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಆಗಬಹುದು, ಅವರ ಹೆಸರನ್ನೂ ಇದರಲ್ಲೇ ಸೇರಿಸುತ್ತೇನೆ.

ಚಾಮರಾಜನಗರ ಜಿಲ್ಲೆಯ ಹೆಗ್ಗಡದೇವನಕೋಟೆಯ ಬೀಚನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀ ಕೆ. ಗುರುಸ್ವಾಮಿ ಅವರು ತಮಿಳುನಾಡಿಗೆ ಕಬಿನಿ ಜಲಾಶಯದಿಂದ ನೀರು ಬಿಡುವುದನ್ನು ವಿರೋಧಿಸಿ ದಿನಾಂಕ 18 ನೇ ಸೆಪ್ಟೆಂಬರ್, 2002 ರಂದು ಆತ್ಮಾರ್ಪಣೆ ಮಾಡಿಕೊಂಡರು.

ಈಗ ಮಾನ್ಯ ಸದಸ್ಯರುಗಳೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಸದನವು ಒಂದು ನಿಮಿಷ ಮೌನವನ್ನಾಚರಿಸಿತು)

ಮೃತರ ಕುಟುಂಬಕ್ಕೆ ಸದರಿ ನಿರ್ಣಯಗಳನ್ನು ಕಳುಹಿಸಿಕೊಡಲಾಗುವುದು. ಈಗ ಒಂದು ಪ್ರಕಟಣೆ.